ಶ್ರೀಮತಿ ಕೆ. ಎಸ್. ನಾಗರತ್ನಮ್ಮ :– ನಾನು ಈಗ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಆಸ್ತಿ, ಆದ್ದರಿಂದ ಎಲ್ಲರ ಕಷ್ಟವನ್ನೂ ತಿಳಿದುಕೊಳ್ಳಬೇಕಾದುದು ಅತ್ಯಾವಶ್ಯಕ. ಹಣದ ಸೌಕರ್ಯ ನೋಡಿಕೊಂಡು, ಎಷ್ಟರ ಮಟ್ಟಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೋ, ಅಷ್ಟರಮಟ್ಟಿಗೆ ಮಾಡುತ್ತೇನೆ.

ವಿಷಯ :– ರಾಜ್ಯದಲ್ಲಿರುವ ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 243 (814)

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) :– ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಕಿರಿಯ ಕಾಲೇಜುಗಳ ಸಂಖ್ಯೆ ಎಷ್ಟು ?

2) ಆ ಕಾಲೇಜುಗಳಲ್ಲಿ ಪ್ರಾಂಶುಪಾಲರುಗಳ ನೇಮಕ ಎಷ್ಟು ಕಾಲೇಜುಗಳಲ್ಲಿ ಆಗಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :–

1) 376.
2) 239.

ಶ್ರೀ ನಾರಾಯಣರಾವ್ ಮನಹಳ್ಳಿ :– ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರದ ಪ್ರಕಾರ 137 ಜೂನಿಯರ್ ಕಾಲೇಜುಗಳಲ್ಲಿ ಪ್ರಿನ್ಸಿಪಾಲರುಗಳು ಇಲ್ಲ; ಪ್ರಿನ್ಸಿಪಾಲರ ಪೋಸ್ಟಿಂಗ್ ಆಗಿಲ್ಲ. ಬಹುಶಃ ಆ ಸ್ಟಾಫ್‌ನಲ್ಲೇ ಇದ್ದಂಥ ಉಪನ್ಯಾಸಕರೊಬ್ಬರು ಇನ್‌ಚಾರ್ಜ್ ಪ್ರಿನ್ಸಿಪಾಲರಾದರೆ, ಆ ಕಾಲೇಜಿನಲ್ಲಿ ಅಭ್ಯಾಸ ಹೇಗೆ ನಡೆಯುತ್ತದೆ ಎಂಬುದು ತಮಗೂ ಗೊತ್ತಿದೆ. ಇಂತಹ 137 ಜೂನಿಯರ್ ಕಾಲೇಜುಗಳಲ್ಲಿ ಸರ್ಕಾರ ದವರು ಎಷ್ಟು ದಿವಸಗಳಲ್ಲಿ ಪ್ರಿನ್ಸಿಪಾಲರ ಪೋಸ್ಟನ್ನು ಭರ್ತಿ ಮಾಡುತ್ತಾರೆ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ 137 ಪ್ರಾಂಶುಪಾಲರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಬಡ್ತಿಯಿಂದ ತುಂಬುವುದಕ್ಕೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಬಹುಶಃ ಕೆಲವೇ ದಿವಸಗಳಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ವಿಷಯ :– ಮೀನುಗಾರರಿಗೆ ಜೀವವಿಮಾ ಯೋಜನೆಯನ್ನು ಜಾರಿಗೊಳಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 244 (1207)

ಶ್ರೀ ಬ್ಲೇಸಿಯಸ್ ಡಿಸೋಜಾ (ಮಂಗಳೂರು) :– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮಂಗಳೂರು ಆಳಿವೆಯಲ್ಲಿ 1983 ರಿಂದ ಸಂಭವಿಸಿದ ದೋಣಿ ದುರಂತಗಳ ಒಟ್ಟು ಸಂಖ್ಯೆ

2) ಜೀವ ಕಳೆದುಕೊಂಡವರ ಒಟ್ಟು ಸಂಖ್ಯೆ ?

3) ಒಟ್ಟು ಆಸ್ತಿ ನಷ್ಟ ?

4) ಸಮುದ್ರದಲ್ಲಿ ಸಂಭವಿಸುತ್ತಿರುವ ಅಪಘಾತಗಳ ಮೇಲೆ ಮೀನುಗಾರರಿಗೆ ಜೀವವಿಮಾ ಯೋಜನೆಯನ್ನು ರೂಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

5) ಹಾಗಿದ್ದಲ್ಲಿ, ಎಂದಿನಿಂದ ಈ ಯೋಜನೆಯು ಜಾರಿಗೆ ಬರಲಿದೆ ?

ಶ್ರೀ ಕೆ. ಜೆ. ಜಾರ್ಜ್ :– (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :–

1) 35.
2) 16.
3) ರೂ. 21.44 ಲಕ್ಷ.
4) ಇಲ್ಲಾ. ಆದರೂ ಮೀನುಗಾರರ ಸಹಕಾರ ಸಂಘಗಳ ಸಾಮೂಹಿಕ ಮೀನುಗಾರರ ಸದಸ್ಯರಿಗೆ ಜನತಾ ಪ್ರಿಯತ್ವಕ ಅಪಘಾತ ವಿಮಾ ಯೋಜನೆಯು 1983–84ನೇ ಸಾಲಿನಿಂದ ಚಾಲ್ತಿಯಲ್ಲಿದೆ.
5) ಉದ್ಭವಿಸುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ :– ಮಾನ್ಯ ಅಧ್ಯಕ್ಷರೇ, ಈ ಉತ್ತರದಲ್ಲಿ ಒಟ್ಟು 35 ಆಕ್ಸಿಡೆಂಟ್‌ಗಳು ಆಗಿವೆ, 16 ಜೀವ ಹಾನಿಯಾಗಿದೆ, ಒಟ್ಟು 84.44 ಲಕ್ಷ ರೂಪಾಯಿಗಳ ಆಸ್ತಿ ನಾಶವಾಗಿದೆ ಎಂದು ಕೊಟ್ಟಿದ್ದಾರೆ. ಇನ್‌ಷ್ಯೂರೆನ್ಸ್ ವಿಷಯ ಇಷ್ಟರವರೆಗೆ ಮಾಡಲಿಲ್ಲವೆಂದು ಹೇಳುತ್ತಾರೆ. ಸಮುದ್ರದಲ್ಲಿ ಯಾವಾಗಲಾದರೂ ಯಾರಾದರೂ ಸತ್ತು ಹೋದರೆ ನಾವು ಬೇಗ ಇನ್‌ಷ್ಯೂರೆನ್ಸ್ ಮಾಡುತ್ತೇವೆ ಎಂಬ ಉತ್ತರ ಸರಕಾರದಿಂದ ಬರುತ್ತಿದೆ. ಇದೇ ಆಗಷ್ಟ್‌ನಲ್ಲಿ 10 ಜನರು ಸತ್ತು ಹೋದ ಸಮಯದಲ್ಲಿ ನಮ್ಮ ಮಂತ್ರಿಯವರು ಇನ್‌ಷ್ಯೂರೆನ್ಸ್, ಸ್ಕೀಮ್ ಕೂಡಲೇ ಜಾರಿಗೆ ತರುತ್ತೇವೆಂದು ಹೇಳಿದ್ದರು. ಆದರೆ ಇಲ್ಲಿ ಡಿಪಾರ್ಟ್‌ಮೆಂಟ್‌ನವರು ನಮ್ಮ ಮಂತ್ರಿಯವರನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಇನ್‌ಷ್ಯೂರೆನ್ಸ್ ಸ್ಕೀಮ್‌ನ ವಿಷಯವೇ ಇಲ್ಲ ಎಂದು ಹೇಳಿದ್ದಾರೆ. ಡ್ರೆಡ್ಜಿಂಗ್ ಮಾಡದಿದ್ದ ಕಾರಣ ಬಹಳಷ್ಟು ಸಿಲ್ಟ್ ಅಕ್ಯುಮಲೇಟ್ ಆಗಿ ಈ ರೀತಿ ಅಪಘಾತ ಸಂಭವಿಸುತ್ತದೆ ಎಂದು ನಾನು ಮಂತ್ರಿಯವರಿಗೆ ಹೇಳುತ್ತೇನೆ. Every year we are requesting the Government and the Government is assuring us that dredging will be done. ಇಷ್ಟರವರೆಗೆ ಡ್ರೆಡ್ಜಿಂಗ್ ಮಾಡಲಿಲ್ಲ. ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮೊನ್ನೆತಾನೆ ಇದನ್ನು ಮಾಡುತ್ತೇವೆಂದು ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದರೂ ಯಾವ ತರಹದ ಕೆಲಸ ಶುರುವಾಗಲಿಲ್ಲ. ಮೊನ್ನೆ ತೀರಿಹೋದ ಹತ್ತು ಜನರಿಗೆ ಬರೀ 3 ಸಾವಿರ ರೂಪಾಯಿಗಳ ಕಂಪೆನ್‌ಸೇಷನ್ ಕೊಟ್ಟಿದ್ದಾರೆ. ಕಮ್ಯುನಲ್ ರೈಟ್ಸ್ ಆದಾಗ ಒಬ್ಬೊಬ್ಬರಿಗೆ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಫಿಷರಮನ್ ಕಮ್ಯುನಿಟಿಯವರು ಏನಿದ್ದಾರೆ ಇವರೆ ಬಹಳ ಬಡವರು. ಇವರಿಗೂ ಸಹ 50 ಸಾವಿರ ರೂಪಾಯಿ ಕೊಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಸನ್ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದಿಂದ ಈ ತರಹ ಇನ್‌ಷ್ಯೂರೆನ್ಸ್ ಸ್ಕೀಮ್ ಮಾಡುವುದಕ್ಕೆ ಯೋಜನೆ ಇಲ್ಲ ಎಂದು ನಾವು ಹೇಳಿದ್ದೇವೆ. ಆದರೆ ಈಗಾಗಲೇ 1983–84ನೇ ಇಸವಿಯಿಂದ ಜನತಾ ವೈಯಕ್ತಿಕ ಅಪಘಾತ ವಿಮಾ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಇದರ ಪ್ರಕಾರ ರಾಷ್ಟ್ರೀಯ ಮೀನುಗಾರಿಕೆ ಸಹಕಾರ ಸಂಘದ ಮುಖಾ ಮಂಡಲದವರು ಇನ್‌ಷ್ಯೂರೆನ್ಸ್ ಮಾಡುತ್ತಾರೆ. ಇನ್‌ಷ್ಯೂರೆನ್ಸ್ ಪ್ರೀಮಿಯಂನಲ್ಲಿ 50 ಪರ್ಸೆಂಟ್‌ನ್ನು ಸ್ಟೇಟ್‌ಗೌರ್ನಮೆಂಟ್ ಕೊಡುತ್ತದೆ. ಇನ್ನೊಂದು 50 ಪರ್ಸೆಂಟ್ ಸೆಂಟ್ರಲ್ ಗೌರ್ನಮೆಂಟ್ ಕೊಡುತ್ತದೆ ಈ ಪ್ರಕಾರ 83 ನೇ ಇಸವಿಯಿಂದ ಒಂದು ವರ್ಷಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸುಮಾರು 5 ಲಕ್ಷ 40 ಸಾವಿರ ರೂಪಾಯಿಗಳ ಪ್ರೀಮಿಯಂ ಕೊಡುತ್ತಿವೆ. ಸಾಕಷ್ಟು ಜನರಿಗೆ ಈ ಇನ್‌ಷ್ಯೂರೆನ್ಸ್ ಸ್ಕೀಮಿನಿಂದ ಪ್ರಯೋಜನ ಬರುತ್ತಿದೆ. ಸಾಕಷ್ಟು ಮೀನುಗಾರರು ಇದಕ್ಕೆ ಸದಸ್ಯರಾದರೆ ಅವರಿಗೂ ಸಹ ಇದರ ಲಾಭ ಬರುತ್ತದೆ. ಸಾಕಷ್ಟು ಮೀನುಗಾರರು ಇದರ ಸದಸ್ಯತ್ವ ಪಡೆಯುವುದಕ್ಕೆ ಮಾನ್ಯ ಸದಸ್ಯರು ಜೋಳಬೇಕು. ಮತ್ತೆ ಡ್ರೆಡ್ಜಿಂಗ್ ಮಾಡಲು ಈಗಾಗಲೇ ನಮ್ಮ ಫಿಷರೀಸ್ ಡಿಪಾರ್ಟ್‌ಮೆಂಟ್ ಒಂದು ಕ್ರಮ ತೆಗೆದುಕೊಳ್ಳುತ್ತಿದೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ :– ಇದೇ ಆಗಸ್ಟ್‌ನಲ್ಲಿ 10 ಜನ ತೀರಿಹೋದರು. ಅವರಿಗೆ ಒಂದೊಂದು ಫ್ಯಾಮಿಲಿಗೆ ಕೇವಲ ಮೂರು ಸಾವಿರ ಪರಿಹಾರ ಕೊಟ್ಟಿದ್ದಾರೆ. ಅವರೆಲ್ಲಾ ತುಂಬಾ ಬಡವರು. ಕಮ್ಯುನಲ್ ರಯೆಟ್ಸ್‌ನಲ್ಲಿ ಸತ್ತವರಿಗೆ ಯಾವರೀತಿ 50 ಸಾವಿರ ರೂಪಾಯಿ ಪರಿಹಾರ ಕೊಡುತ್ತೀರಿ, ಅದೇ ರೀತಿ ಇವರಿಗೂ ಸಹ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ನಾನು ಈಗಾಗಲೇ ಹೇಳಿದ್ದೇನೆ. ಒಂದು ವರ್ಷಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರದವರು 5 ಲಕ್ಷ ರೂಪಾಯಿ ಪ್ರೀಮಿಯಂ ಕೊಡುತ್ತಿದ್ದೇವೆ. ಈ ಮೀನುಗಾರರು ಯಾರು ಸಮುದ್ರದಲ್ಲಿ ಮೀನು ಹಿಡಿಯಲಿಕ್ಕೆ ಹೋಗುತ್ತಾರೆ ಅವರು ಇದರ ಸದಸ್ಯರಾಗಬೇಕು. ಆಲ್ ಇಂಡಿಯಾ ಫಿಷರೀಸ್ ಮಾರ್ಕೆಟಿಂಗ್ ಫೆಡರೇಷನ್‌ನವರು ಇದನ್ನು ಮಾಡುತ್ತಾರೆ. ಅದರ ಸದಸ್ಯರಾದರೆ ಇವರಿಗೆ ಇನ್‌ಷ್ಯೂರೆನ್ಸ್ ಹಣ ಬರುತ್ತದೆ. ಇದರ ಜೊತೆಗೆ ಸರ್ಕಾರ ಕಂಪೆನ್‌ಸೇಷನ್ ಏನಾದರೂ ಹೆಚ್ಚು ಕೊಡುವುದಕ್ಕೆ ಆಗುತ್ತದೆಯೇ ಎಂದು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ :– ಮಾನ್ಯ ಅಧ್ಯಕ್ಷರೇ, ಈ ಅಪಘಾತ ಆಗುತ್ತಿರುವುದು ಹೂಳೆತ್ತದಿರುವುದರಿಂದ ಎಂದು ಕಳೆದ 5–10 ವರ್ಷದಿಂದ ಇಲ್ಲಿ ಹೇಳುತ್ತಿದ್ದೇವೆ. ಇವತ್ತಿನವರೆಗೂ ಹೂಳೆತ್ತುವಂತಹ ಕೆಲಸ ಆಗಲಿಲ್ಲ. ಆದುದರಿಂದ ಮೀನುಗಾರರು ಸಾಯುವುದಕ್ಕೆ ಕಾರಣವಾಯಿತು. ಹಿಂದಿನ ಮಂತ್ರಿಗಳು ಬಂದಾಗ ಈ ಅಪಘಾತದಲ್ಲಿ ತೀರಿಹೋದ ಹತ್ತು ಜನಕ್ಕೆ 20 ಸಾವಿರ ರೂಪಾಯಿಗಳನ್ನು ಈಗಲೇ ಕೊಡುತ್ತೇವೆಂದು ಹೇಳಿದ್ದರು. ಈ ಮೀನುಗಾರರು ಸಂಪೂರ್ಣವಾಗಿ ಬಡವರು. ಆದರೆ ಅದೂ ಆಗಲಿಲ್ಲ. ಕೇವಲ ಮೂರು ಸಾವಿರ ರೂಪಾಯಿ ಎಂದರೆ ಆ ಬಡವರು ಏನು ಮಾಡಬೇಕು. ಕೋಮುಗಲಭೆ ಆದರೆ 50 ಸಾವಿರ ರೂಪಾಯಿ ಕೊಡುವಂತಹದು ಇದೆ ಇಲ್ಲಿ ಎಲ್ಲಾ ಬಡವರು ತೀರಿ ಹೋಗಿದ್ದಾರೆ. ಇದು ಹೂಳೆತ್ತದೆ ಇರುವುದರಿಂದ ಆಗಿರುವ ಅಪಘಾತ ಆಗಿರುವುದರಿಂದ ಇವರಿಗೆ ಹೆಚ್ಚು ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಮೀನುಗಾರರಿಗೆ ಕಡ್ಡಾಯವಾಗಿ ವಿಮೆ ಆಳವಡಿಸುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೇ, ಮೀನುಗಾರರು ಬಡವರು; ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೂ ಸಹ ಒಂದೊಂದು ಸಾರಿ ಏನಾಗುತ್ತದೆ ಅಂದರೆ ಸಮುದ್ರದಲ್ಲಿ ಮೀನು ಹಿಡಿಯಲು ಇಂತಿಂತಹ ಸಂದರ್ಭಗಳಲ್ಲಿ ಮಾತ್ರ ಹೋಗಬೇಕೆಂದು ಇರುತ್ತದೆ. ಅದನ್ನು ಮೀರಿ ಮೀನುಗಾರರು ಮೀನು ಹಿಡಿಯಲು ಹೋಗುತ್ತಾರೆ. ಈಗ ಮಳೆಗಾಲದಲ್ಲಿ ಮೀನು ಹಿಡಿಯಲು ಹೋಗಬಾರದು ಎಂದು ಪೋರ್ಟ್ ಅಥಾರಿಟಿಯವರು ಹೇಳಿದ್ದರೂ ಸಹ ಕೆಲವು ಮೀನುಗಾರರು ಹೋಗಿ ಮೀನು ಹಿಡಿಯುತ್ತಾರೆ. ಮತ್ತೆ ಊಳು ಎತ್ತುವ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ನಮ್ಮ ಡಿಪಾರ್ಟ್‌ಮೆಂಟ್‌ನವರು ಈ ವಿಚಾರದಲ್ಲಿ ಆದಷ್ಟು ಬೇಗ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಮತ್ತೆ ರಿಲೀಫ್ ಕೊಡುವ ಬಗ್ಗೆ ಹೇಳುವುದಾದರೆ ಜಿಲ್ಲಾ ಪರಿಷತ್ತಿನವರು ಇದನ್ನು ಕೊಡುವಂತಹ ವ್ಯವಸ್ಥೆ ಮಾಡುತ್ತಾರೆ.

ಶ್ರೀ ವಿಜಯಕುಮಾರ್ ಶೆಟ್ಟಿ :– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪರಿಹಾರ ಏನೋ ಸ್ವಲ್ಪ ಕೊಟ್ಟಿದ್ದಾರೆ; ಆದರ ಜೊತೆಯಲ್ಲಿಯೇ ಮಾನ್ಯ ಮಂತ್ರಿಗಳು ಆ ಕ್ಷೇತ್ರಗಳಿಗೆ ಭೇಟಿ ಕೊಟ್ಟಾಗ ಅಲ್ಲಿ ಯಾರು ಆರ್ಥಿಕವಾಗಿ ಹಿಂದುಳಿದ ವರ್ಗದವರು ಇರುತ್ತಾರೋ ಅಂತಹವರಿಗೆ ಕೆಲಸ ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಅವರು ಸಾಧ್ಯವಾದಷ್ಟು ಸಕಾಲದಲ್ಲಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆದರ ಜೊತೆಯಲ್ಲಿಯೇ ಡ್ರೆಡ್ಜಿಂಗ್ ಮಾಡುತ್ತೇವೆಂದು ಕಳೆದ 10 ವರ್ಷಗಳಿಂದಲೂ ಸಹ ಸರ್ಕಾರದವರು ಆಶ್ವಾಸನೆಯನ್ನು ಕೊಡುತ್ತಲೇ ಬಂದಿದ್ದಾರೆ. ಈ ಬಗ್ಗೆ ಮಳೆಗಾಲದಲ್ಲಿ ವಿಶೇಷವಾದ ಚರ್ಚೆ ಮಾಡುತ್ತಾರೆ. ಮೀಟಿಂಗ್‌ಗಳನ್ನು ಕರೆಯುತ್ತಾರೆ. ಹೈ ಲೆವೆಲ್ ಮೀಟಿಂಗ್‌ಗಳನ್ನೂ ಸಹ ಕರೆಯುತ್ತಾರೆ. ಆದರೂ ಈ ಡ್ರೆಡ್ಜಿಂಗ್ ಮಾಡಲು ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಹಲವಾರು ಸಾರಿ ಭೇಟಿ ಮಾಡಿ ನೋಡಿ, ಅವರ ಹತ್ತಿರ ಇದಕ್ಕೆ ಬೇಕಾಡ ವ್ಯವಸ್ಥೆ ಇಲ್ಲದೆ ಇದ್ದುದರಿಂದ ಸರ್ವೆ ಮಾಡಿದ ನಂತರ ವಾಪಸ್ ಹೋಗಿದ್ದಾರೆ. ಸಾಕಷ್ಟು ಹಣ ಖರ್ಚು ಮಾಡಿದರೂ ಸಹ ಡ್ರೆಡ್ಜಿಂಗ್ ಕೆಲಸ ಮಾತ್ರ ನಡೆಯಲಿಲ್ಲ. ನಮ್ಮಲ್ಲಿ ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಸರಿಯಾದ ವ್ಯವಸ್ಥೆ ಇಲ್ಲದೆ ಇರುವುದರಿಂದ ಗ್ಯೋಬ್ ಟೆಂಡರ್‌ನ್ನು ಕರೆದು ಮುಂದಿನ ವರ್ಷ ಈ ವೇಳೆಗೆ ಈ ರೀತಿಯ ಒಂದು ಅನಾಹುತಗಳು ಆಗದಂತೆ ತಾವು ತಕ್ಷಣ ಒಂದು ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :– ಮಾನ್ಯ ಅಧ್ಯಕ್ಷರೇ, ಮೀನುಗಾರರ ಸಮಸ್ಯೆ ನಾವು ಹಲವಾರು ವರ್ಷಗಳಿಂದ ನಾವು ಕೇಳುತ್ತಲೇ ಇದ್ದೇವೆ. ಸಮುದ್ರದಲ್ಲಿ ಹೂಳು ಎತ್ತುವುದು ಮತ್ತು ಮೀನುಗಾರರು ಹೋಗತಕ್ಕಂಥ ಸಂದರ್ಭದಲ್ಲಿ ಒಂದು ಶಾಶ್ವತವಾದ ನೆಲೆಯಲ್ಲಿ ನಿಲ್ಲುವಂತಹ ವ್ಯವಸ್ಥೆ ಆಗಬೇಕು. ಆದರೆ ಅನೇಕ ವರ್ಷಗಳಿಂದ ಅನೇಕ ಸರ್ಕಾರಗಳು ಬದಲಾವಣೆಯಾದರೂ ಇವರ ಸಮಸ್ಯೆ ಮಾತ್ರ ಬಗೆಹರಿಯಲಿಲ್ಲ. ಸರ್ಕಾರಗಳು ಬದಲಾವಣೆಯಾದ ಸಂದರ್ಭದಲ್ಲಿ ಆಶ್ವಾಸನೆಗಳನ್ನು ಕೊಡುತ್ತಾರೆ. ಸಮಸ್ಯೆ ಮಾತ್ರ ಬಗೆಹರಿಯುವುದಿಲ್ಲ. ಅವರ ಆಶ್ವಾಸನೆಗೆ ಬೆಲೆ ಏನು ಬರುತ್ತದೆ? ಕಳೆದ ಸರ್ಕಾರದಲ್ಲಿ ಮಾನ್ಯ ಭೈರೇಗೌಡರು ಈ ಇಲಾಖೆ ಮಂತ್ರಿಯಾಗಿದ್ದರು ಆದೇ ರೀತಿಯಲ್ಲಿ ಅನೇಕ ಜನ ಮಂತ್ರಿಗಳು ಬಂದು ಹೋದರು. ಅವರ ಸಮಸ್ಯೆಯನ್ನು ಬಗೆಹರಿಸುವ ಆಲೋಚನೆ ಸಹ ಮಾಡಲಿಲ್ಲ. ಅವರ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವುದು ನನ್ನ ಸಲಹೆ ಇನ್ನು ಪರಿಹಾರ ಅವರಿಗೆ ಸಕಾಲದಲ್ಲಿ ಸಿಗುತ್ತಿಲ್ಲ; ಸಿಕ್ಕಿದರೂ ಸಹ ಬಾರಿ ಕಡಿಮೆ. ಈ ಒಂದು ಸಮಸ್ಯೆಯನ್ನು ನಮ್ಮ ಸರ್ಕಾರ ಪರಿಹಾರ ಮಾಡಬೇಕು. ಮೀನುಗಾರರು ಹೋಗಬೇಕಾದರೆ ಸರ್ಕಾರ ಹೂಳು ಎತ್ತುವ ಕೆಲಸ ಮೊದಲು ಮಾಡಬೇಕು. ಅವರು ಮೀನು ಹಿಡಿಯಲು ಹೋಗಿ ವಾಪಸ್ ಬರತಕ್ಕಂಥ ಸಂದರ್ಭದಲ್ಲಿ ಈ ಅಪಘಾತಗಳು ನಡೆಯುತ್ತವೆ. ಆಗ ಅವರಿಗೆ ಒಂದು ಶಾಶ್ವತವಾದ ಪರಿಹಾರ ಮತ್ತು ಈ ಸಮಸ್ಯೆಯನ್ನು ಯಾವ ಸಮಯದಲ್ಲಿ ಮಾಡಲಿಕ್ಕೆ ಸಾಧ್ಯ ಇದೆ ಎಂದು ನಿಖರವಾಗಿ ಸರ್ಕಾರ ಹೇಳಬೇಕು. ಆದು ಬಿಟ್ಟು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ, ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ, ಅವರಿಗೆ ಹೇಳಿದ್ದೇವೆ ಇವರಿಗೆ ಹೇಳಿದ್ದೇವೆ ಎಂದು ಹಲವಾರು ಸಮಸ್ಯೆಗಳನ್ನು ನಾವು ಕಾಣುತ್ತಿದ್ದೇವೆ. ಇದನ್ನು ಕೇಳಿ ಕೇಳಿ ಸಾಕಾಗಿ ಹೋಗಿದೆ. ಕಳೆದ 8 ವರ್ಷಗಳಿಂದ ಇದೆ ಮಾತು. ಆದ್ದರಿಂದ ಮಾನ್ಯ ಮಂತ್ರಿಗಳು ಯಾವ ಸಮಯದಲ್ಲಿ ನಿರ್ದಿಷ್ಟವಾಗಿ ನಿಖರವಾಗಿ ಮಾಡುತ್ತೀರಿ ಎಂದು ಹೇಳುವಂತಹ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆದಷ್ಟು ಬೇಗ ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ನಾನು ಈ ಇಲಾಖಾ ಮಂತ್ರಿಯಾಗಿದ್ದೆ. ಆಗ ಸುಮಾರು 4 ಕೋಟಿ ರೂಪಾಯಿಗಳ ಖರ್ಚಿನಲ್ಲಿ ಇಲಾಖೆಯವರೇ ಒಂದು ಡ್ರೆಜಿಂಗ್ ಮಷಿನ್ ಕೊಂಡುಕೊಂಡು ಹಳೆ ಬಂದರಿನಲ್ಲಿ ಹೂಳು ಎತ್ತುವುದರ ಜೊತೆಗೆ ಪಶ್ಚಿಮ ಕರಾವಳಿಯ ಕೆಲವು ಬಂದರುಗಳಲ್ಲಿ ಹೂಳು ಎತ್ತಲು ಅನುಕೂಲವಾಗುತ್ತದೆಂದು ಹೇಳಿ 4 ಕೋಟಿ ರೂಪಾಯಿಗಳಲ್ಲಿ ಇಲಾಖೆಯವರೇ ಒಂದು ಡ್ರಜ್ಜರ್ ಯಂತ್ರವನ್ನು ಕೊಂಡುಕೊಳ್ಳುವ ಅಂದಾಜು ಇತ್ತು, ಈಗ ಆ ಅಂದಾಜು ಏನಾಗಿದೆ? ರಾಜ್ಯ ಸರ್ಕಾರ ಡ್ರೆಡ್ಜರ್ ಕೊಂಡುಕೊಳ್ಳುತ್ತದೆಯೋ ಅಥವಾ ಇಲ್ಲವೇ ಎನ್ನುವುದನ್ನು ತಿಳಿಸಬೇಕು.

ಏಕೆಂದರೆ, ಕಾಂಪನ್‌ಸೇಷನ್ ಕೊಡುವುದು ಬೇರೆ. ಮೂಲ ಸಮಸ್ಯೆ ಇರತಕ್ಕಂಥಾದ್ದು ಡ್ರೆಡ್ಜರ್ ಮಾಡದೇ ಇರುವುದು. ಈ ಮೂಲ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಡ್ರೆಡ್ಜರ್ ಕೊಂಡುಕೊಳ್ಳಬೇಕಾಗುತ್ತದೆ. ಅದಕ್ಕೆ ತಾವು ಆಲೋಚನೆ ಮಾಡಿ ಡ್ರೆಡ್ಜರ್ ಕೊಂಡುಕೊಳ್ಳುವುದಕ್ಕೆ ಏನು ಹೇಳುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್ :– ಮಾನ್ಯ ಅಧ್ಯಕ್ಷರೇ, ಬಹುಶಃ ಬೈರೇಗೌಡರು ಮೊನುಗಾರಿಕೆ ಮಂತ್ರಿಯಾಗಿದ್ದಾಗ ಆ ಡ್ರಜ್ಜರ್‌ನ್ನು ಕೊಂಡುಕೊಂಡಿದ್ದಿದ್ದರೆ ಇವತ್ತು ಇಷ್ಟು ಕಷ್ಟ ಬರುತ್ತಿರಲಿಲ್ಲ. ಅವರು ಯೋಜನೆ ಹಾಕಿ ಹೋಗಿದ್ದಾರೆಯೇ ಹೊರತು ಬೇರೆ ಏನೂ ಮಾಡಿಲ್ಲ. ಈಗಾಗಲೇ ನಾನು ಉತ್ತರ ಹೇಳಿದ್ದೇನೆ. ಆದಷ್ಟು ಬೇಗ ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದ್ದೇನೆ.

ವಿಷಯ :– ಗುತ್ತಿಗೆಗೆ ಕೊಟ್ಟಿರುವ ನಗರ ಪಾಲಿಕೆಯ ನಿವೇಶನಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 245 (1002)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಗುತ್ತಿಗೆಗೆ ಕೊಟ್ಟಿರುವ ನಗರ ಪಾಲಿಕೆಯ ನಿವೇಶನಗಳೆಷ್ಟು (ನಿವೇಶನಗಳ ಅಳತೆ ಮತ್ತು ಗುತ್ತಿಗೆಯ ವಿವರಗಳನ್ನು ಒದಗಿಸುವುದು) ?

ಬ) ಗುತ್ತಿಗೆ ನೀಡಿರುವ ಸ್ವತ್ತುಗಳಿಗೆ ನಿಗದಿಪಡಿಸಿರುವ ದರ ?

ಶ್ರೀ ಕೆ. ಜೆ. ಜಾರ್ಜ್ :– (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) 19.

ನಿವೇಶನಗಳ ಅಳತೆ ಮತ್ತು ಗುತ್ತಿಗೆಯ ವಿವರಗಳನ್ನು ಅನುಬಂಧವಲ್ಲಿ ಒದಗಿಸಲಾಗಿದೆ.

ಬ) ಅನುಬಂಧದಲ್ಲಿ ನಮೂದಿಸಲಾಗಿದೆ.